[Govt. of Karnataka C.R.P. 67]

| |
|---|
| **Deposition Sheets (RP.No.57) Form No.4 (Civil)** |

**IN THE COURT OF <u>CIVIL JUDGE & J.M.F.C., KARKALA.</u>**

**Criminal Case No. 1564/2023**

**..................................................Vs....................................**

ಸಾಕ್ಷಿದಾರಳ ಹೆಸರು ಃ ಸೋಮಶೇಖರ್ ಸಿ ಪಿ.ಡಬ್ಲ್ಯೂಃ 3

ತಂದೆಯ ಹೆಸರುಃ ಚಿನ್ನಸ್ವಾಮಿ ಡಿ ಸಿ.ಡಬ್ಲ್ಯೂಃ 3

ಪ್ರಾಯ ಃ 37 ವರ್ಷ

ಉದ್ಯೋಗ ಃ ಸಹಾಯಕ ಅಭಿಯಂತರರು,

ಲೋಕೋಪಯೋಗಿ ಇಲಾಖೆ, ಕಾರ್ಕಳ

ವಾಸ ಃ ಕಾರ್ಕಳ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ 10-01-2025

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ನಾನು ದಿಃ 24-05-2021 ರಿಂದ ಡಿಸೆಂಬರ್ 2021 ರವರೆಗೆ ಕಾರ್ಕಳ ಪುರಸಭೆಯ ಪ್ರಭಾರ ಹಿರಿಯ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಕಾರ್ಕಳ ಮುಂಡ್ಲಿ ಡ್ಯಾಮ್‌ನಲ್ಲಿ ನೀರನ್ನು ತಡೆದು ನಿಲ್ಲಿಸಲು ಅಳವಡಿಸಿದ ಗೇಟ್ ಗಳಿಂದ ಮಳೆಗಾಲದಲ್ಲಿ ರೈತರಿಗೆ ಬೆಳೆ ಹಾಗೂ ಮನೆಗಳಿಗೆ ತೊಂದರೆಯಾಗುತ್ತದೆ ಎಂದು ದೂರುಗಳು ಬಂದಿರುತ್ತದೆ ಅದರಂತೆ ದಿಃ 28-05-2021 ರಂದು ನಾನು ಹಾಗೂ ಚಾಸಾ 1, ಪುರಸಭೆ ಅಧ್ಯಕ್ಷರಾದ ಸುಮಕೇಶವರವರು ಸೇರಿ ಸದರಿ ಮುಂಡ್ಲಿ ಡ್ಯಾಮ್ ಗೆ ಹೋಗಿ ಸ್ಥಳ ಪರಿಶೀಲನೆ ಮಾಡಿರುತ್ತೇವೆ. ಸುರಕ್ಷತೆ ದೃಷ್ಟಿಯಿಂದ ಹಾಗೂ ಮಳೆಗಾಲದಲ್ಲಿ ತೊಂದರೆಯಾಗುವ ಉದ್ದೇಶದಿಂದ ಗೇಟುಗಳನ್ನು ತೆರವುಗೊಳಿಸುವಂತೆ ಚಾಸಾ 1 ರವರು ಸೂಚಿಸಿರುತ್ತಾರೆ ಹಾಗೂ ಕಚೇರಿ ಟಿಪ್ಪಣಿಯಲ್ಲಿ ಒಪ್ಪಿಗೆ ನೀಡಿರುತ್ತಾರೆ. ದಿಃ 04-06-2021 ರಂದು ಸದರಿ ಗೇಟುಗಳನ್ನು ತೆರವುಗೊಳಿಸಲು ಚಾಸಾ 7 ರವರ ಮಾಲಿಕತ್ವದ ಗುತ್ತಿಗೆದಾರರಿಗೆ ಆದೇಶ ನೀಡಲಾಗಿರುತ್ತದೆ. ಅದರಂತೆ ದಿಃ 06-06-2021 ರಿಂದ 14-06-2021 ರವರೆಗೆ 6-9 ಜನ ಕೆಲಸ ನಿರ್ವಹಿಸಿ 14 ಕಿಂಡಿಗಳಿಂದ 110 ಎಮ್ ಎಸ್ ಗೇಟುಗಳನ್ನು ತೆರವುಗೊಳಿಸಿ ಅಲ್ಲೇ ಶೇಖರಿಸಿಟ್ಟಿರುತ್ತಾರೆ. ಈ ಬಗ್ಗೆ ನಾನು ಕಛೇರಿಗೆ ವರದಿ ನೀಡಿರುತ್ತೇನೆ. ಆದಾದನಂತರ ಚಾಸಾ 1 ರವರು 160 ಎಮ್ ಎಸ್ ಗೇಟುಗಳು

ಸೋಲರ್ ಬ್ಯಾಟರಿಗಳು ಕಳ್ಳತನ ಆಗಿದೆ ಎಂದು ಪೋಲಿಸ್ ಠಾಣೆಗೆ ದೂರು ನೀಡಿರುತ್ತಾರೆ. ಈ ಬಗ್ಗೆ ನಾನು ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಯು ನಿಪಿ-20 ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಪಿ ಎ ಎಸ್ ವಕೀಲರಿಂದಃ

ಪರಿಶೀಲನೆ ಮಾಡಿದ ಬಗ್ಗೆ ಟಿಪ್ಪಣಿ ಅಥವಾ ಯಾವುದೇ ರೆಕಾರ್ಡ್ ಇಲ್ಲ. ಪುರಸಭೆ ಕಚೇರಿಗೆ ಹಾಜರಾದ ಬಗ್ಗೆ ದಾಖಲೆ ಇದೆ. ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಜಿಲ್ಲಾಧಿಕಾರಿಯವರ ಆದೇಶ ಕೂಡ ಇದೆ. ಪುರಸಭೆಯಲ್ಲಿ ನಾನು ಕರ್ತವ್ಯ ನಿರ್ವಹಿಸಿರುವುದಿಲ್ಲ ಎಂದರೆ ಸರಿಯಲ್ಲ. ಅನಂತಕೃಷ್ಣ ರವರಿಗೆ ಕಾಮಗಾರಿ ಆದೇಶ ನೀಡಿದ ದಾಖಲೆ ಇದೆ. ಎಷ್ಟು ಗೇಟುಗಳನ್ನು ಶೇಖರಿಸಿಡಲಾಗಿತ್ತು ಎಂದು ಗೊತ್ತಿಲ್ಲ. 216 ಗೇಟುಗಳನ್ನು ಶೇಖರಿಸಿಟ್ಟ ಬಗ್ಗೆ ದಾಖಲೆ ಇರುವುದಿಲ್ಲ. ನನ್ನ ಹೇಳಿಕೆಯಲ್ಲಿ ಮಳೆ ನೀರಿನಲ್ಲಿ ಕೊಚ್ಚಿ ಹೋದ 5 ಗೇಟುಗಳು ಅಲ್ಲಿ ಇದ್ದವು ಎಂಬ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿ. ಕೆಲವು ಗೇಟುಗಳನ್ನು ಬ್ರಿಡ್ಜ ತರ ಉಪಯೋಗಿಸಿಕೊಂಡಿದ್ದೇವೆ ಎಂದರೆ ಸರಿ. ಇನ್ನು ಕೆಲವು ಗೇಟುಗಳು ಎತ್ತಲು ಸಾಧ್ಯವಾಗದೇ ಡ್ಯಾಮ್ ನೀರಿನಲ್ಲಿಯೇ ಇದ್ದವು.

ಮುಂಡ್ಲಿ ಡ್ಯಾಮ್ ಅನ್ನು ಯಾವ ವರ್ಷದಲ್ಲಿ ನಿರ್ಮಿಸಲಾಗಿದೆ ಎಂದು ಗೊತ್ತಿಲ್ಲ. ಮುಂಡ್ಲಿ ಡ್ಯಾಮ್ ನೀರನ್ನು ಜಿವಿಆರ್ ಪವರ್ ಪ್ಲಾಂಟ್ ನವರು ಉಪಯೋಗಿಸುತ್ತಿದ್ದರು. ಜಿವಿಆರ್ ಪವರ್ ಪ್ಲಾಂಟ್ ನವರು ಸ್ವಯಂ ಚಾಲಿತ ಗೇಟುಗಳನ್ನು ಸ್ವಲ್ಪ ಭಾಗಕ್ಕೆ ಅಳವಡಿಸಿದ್ದರು. ಎಷ್ಟು ಕಿಂಡಿಗಳಿಗೆ ಅಳವಡಿಸಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಜಿವಿಆರ್ ಪವರ್ ಪ್ಲಾಂಟ್ ಪ್ರಾರಂಭವಾಗಿದ್ದು 2014 ರಲ್ಲಿ ಎಂದರೆ ಗೊತ್ತಿಲ್ಲ. ಜಿವಿಆರ್ ಪವರ್ ಪ್ಲಾಂಟ್ ನವರು ಗೇಟುಗಳನ್ನು ಅಳವಡಿಸುವ ಅಧಿಕಾರ ಅವರಿಗೆ ಕೊಡಲಾಗಿದೆ ಎಂಬ ದಾಖಲೆಗಳನ್ನು ನೋಡಿದ್ದೀರಾ ಎಂದರೆ ಇಲ್ಲ. ಪುರಸಭೆ ದಾಖಲೆ ಪ್ರಕಾರ ಜಿವಿಆರ್ ಪವರ್ ಪ್ಲಾಂಟ್ ನವರು ಗೇಟುಗಳನ್ನು ಹಾಕುವ ಮತ್ತು ತೆಗೆಯುವ ಕರ್ವವ್ಯ ವರ್ಗಾಯಿಸಿದ ನಂತರ ಪುರಸಭೆಗೆ ಗೇಟುಗಳನ್ನು ಹಾಕುವ ತೆಗೆಯುವ ಅಧಿಕಾರ ಇಲ್ಲ ಎಂಬ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ.

ಗೇಟುಗಳು 1.5 ಮೀ ಉದ್ದ ಮೂಕಾಲು ಮೀ ಅಗಲ, 0.1 ಮೀ ದಪ್ಪ ಇದ್ದವು. ಒಂದು ಗೇಟಿನ ತೂಕ ಅಂದಾಜು 150 ಕೆ ಜಿ. ಅದನ್ನು ಒಬ್ಬರಿಂದ ತೆಗೆಯಲು ಸಾಧ್ಯವಿಲ್ಲ. ಪುರಸಭೆಯಿಂದ ಆದ ಲೋಪವನ್ನು ಮುಚ್ಚಲು ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಪುರಸಭೆಯಲ್ಲಿ ಬರಿ ಪೇಪರ್ ವರ್ಕ್ ಮಾತ್ರ

ಮಾಡಲಾಗಿದೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ರಾಮ ಸಮುದ್ರ ಹತ್ತಿರ ಕಂಪೌಡ್ ನಲ್ಲಿ ಕೆಲಸಕ್ಕೆ ನೇಮಕ ಆದ ಬಗ್ಗೆ ಗೊತ್ತಿಲ್ಲ. ಆರೋಪಿಯನ್ನು ಮುಂಡ್ಲಿ ಸೇತುವೆ ಉಸ್ತುವಾರಿ ಕೆಲಸಕ್ಕೆ ಕಳುಹಿಸಿದ ಬಗ್ಗೆ ದಾಖಲೆ ನೋಡಿಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ